ಶ್ರೀ ಬಿ. ಪುಟ್ಟಸ್ವಾಮಿ : ಯಾವುದಕ್ಕೆ ಮೊದಲನೇ ಆದ್ಯತೆ ಕೊಡಬೇಕೋ ಅದಕ್ಕೆ ಕೊಟ್ಟು ಹಣದ ಸುಧಾರಣೆಯಾದ ತಕ್ಷಣ ಈ ಕೆಲಸಕಾರ್ಯಗಳಿಗೆ ಮೊದಲನೆ ಆದ್ಯತೆ ಕೊಡುತ್ತೀರಾ ಸ್ವಾಮಿ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ : ಇದಕ್ಕಿಂತಲೂ ಮೊದಲು ಸಾಗರ ತಾಲ್ಲೂಕಿನಲ್ಲಿ ಮುಖ್ಯವಾದ ರಸ್ತೆ ಯಾವರೀತಿಯಾಗಿ ಇದೆ ಎನ್ನುವುದನ್ನು ಸರ್ಕಾರ ಮನಗಂಡಿದೆ ಸಾಮಾನ್ಯವಾಗಿ ಚಿಕ್ಕಮಗಳೂರು, ಹಾಸನ, ಶಿವಮೊಗ್ಗಾ ಜಿಲ್ಲೆಗಳಲ್ಲಿ ಹೆಚ್ಚು ಮಳೆ ಆಗುತ್ತದೆ ಆದ್ದರಿಂದ ಅಲ್ಲಿನ ಸೇತುವೆಗಳು ಮತ್ತು ರಸ್ತೆಗಳ ಬಗ್ಗೆ ಅವಶ್ಯಕವಾಗಿ ಮೊದಲು ಗಮನಕೊಟ್ಟು ನೋಡಿಕೊಳ್ಳಬೇಕೆಂಬುದು ಸರ್ಕಾರದ ಗಮನದಲ್ಲಿದೆ.

RESERVATION OF POSTS TO B. Cs ; S.Cs./S.Ts. BY PUBLIC UNDERTAKINGS

85. SRI K. SIDDAIAH (SANTHEMARAHALLY).—

17. Will the Chief Minister be pleased to state :—

The date on which the Government Order of September 1969 with regards to classification; rotation and reservation of posts to Backward Classes, Scheduled Castes and Scheduled Tribes was given effect to by the respective public undertakings (including Corporation and other autonomous bodies) in the State ?

SRI D. DEVARAJ URS, (CHIEF MINISTER) :—The provisions of the Government Order No. GAD 42 SRR 69-1, dated 6th September 1969 are not applicable to appointments in public undertakings including Corporation and other autonomous bodies since the Government Order provides for reservation of posts only in State Civil Services required to be filled by direct recruitment, in favour of Scheduled Tribes, Scheduled Castes and other Backward Classes.

ಶ್ರೀ ಕೆ. ಸಿದ್ದಯ್ಯ : ಇದರಲ್ಲಿ ತಾವು ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ಗೆ 1969 ನೇ ಇಸವಿಯಲ್ಲಿ ಸರ್ಕಾರಿ ಆರ್ಡ್ಡ್ ಪ್ರಕಾರ ಅಪ್ಲೈ ಆಗುವುದಿಲ್ಲ ಎಂದು ಹೇಳಿದ್ದೀರಿ ಪಬ್ಲಿಕ್ ಅಂಡರ್‌ಟೇಕಿಂಗ್ಸ್, ಜಾಯಿಂಟ್‌ಸ್ಟಾಕ್ ಕಂಪನಿಗಳು ಈ ಆರ್ಡ್ಡ್ಯಲ್ಲಿ ಸೇರಿವೆಯೇ ಸ್ವಾಮಿ ? ಈ ಗೌರ್ನಮೆಂಟ್ ಆರ್ಡರ್ ಎರಡಕ್ಕೂ ಅಪ್ಲೈ ಆಗುವುದಿಲ್ಲವೇ ಸ್ವಾಮಿ ?

ಶ್ರೀ ಡಿ. ದೇವರಾಜ್ ಅರಸ್ :—ಪಬ್ಲಿಕ್ ಅಂಡರ್ ಟೇಕಿಂಗ್ಸ ಅಂದರೆ ಯಾವುದರಲ್ಲಿ ಸರ್ಕಾರದ ಹಣ ತೊಮ್ಮರು ಶೇಕಡ 50 ಪರ್ಸೆಂಟ್‌ಗಿಂತ ಹೆಚ್ಚು ಇದೆಯೋ ಅದು ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಆಗುತ್ತದೆ.

ಶ್ರೀ ಕೆ. ಸಿದ್ದಯ್ಯ:—ತಾವು ಹೇಳಿದಹಾಗೆ ಶೇಕಡ 50 ಪರ್ಸೆಂಟ್‌ಗಿಂತ ಜಾಸ್ತಿಯಾಗಿ ಇದ್ದರೆ ಎಂ. ಎಸ್. ಆರ್. ಟಿ ಸಿ., ಗೌರ್ನಮೆಂಟ್ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ ಮತ್ತು ಇನ್ನು ಇತರೆ ಇಂತಹ ಫ್ಯಾಕ್ಟರಿಗಳಿಗೆ ಈ ಗೌರ್ನಮೆಂಟ್ ಆರ್ಡರ್ ಅಪ್ಲೈ ಆಗುವ ಪ್ರಕಾರ ಈ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಗೆ ಅಪ್ಲೈ ಆಗುವುದಿಲ್ಲವೇ ?

ಶ್ರೀ ಡಿ. ದೇವರಾಜ್ ಅರಸ್ :—ಈ ಗೌರ್ನಮೆಂಟ್ ಆರ್ಡರ್ ಮಾಡಿದ್ದು 1969ನೇ ಇಸವಿಯಲ್ಲಿ ಮತ್ತೆ 1971ರ ಸರ್ಕಾರದ ಆರ್ಡರ್‌ನಲ್ಲಿ ಇದನ್ನು ಅಪ್ಲೈ ಮಾಡಬೇಕು ಎಂದು ಎಲ್ಲರಿಗೂ ಆಜ್ಞೆ ಕಳುಹಿಸಿಕೊಟ್ಟಿದ್ದಾರೆ. ಕೆಲವು ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನವರು ಈ ಆರ್ಡರನ್ನು ಜಾರಿಗೆ ಕೊಡುತ್ತಿದ್ದಾರೆ. ಇದೆ ರೀತಿ ಟೂರಿಸ್ಟ್ ಕಾರ್ಪೊರೇಷನ್, ರೋಡ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಇನ್ನು ಇತರೆ ಕೋ ಆಪರೇಟೀವ್ ಸೊಸೈಟಿಗಳಲ್ಲಿ ಮತ್ತು ಇನ್ನು ಗೌರ್ನಮೆಂಟ್ ಇಂಡಸ್ಟ್ರೀಯಲ್ ಕನ್ಸರ್ನ್‌ಸ್ ಮೈಸೂರು ಶುಗರ್ ಕಂಪೆನಿ, ಎನ್.ಜಿ.ಎಫ್, ಐರನ್ ಅಂಡ್ ಸ್ಟೀಲ್ ಭದ್ರಾವತಿ, ಕರ್ನಾಟಕ ಯೂನಿವರ್‌ಸಿಟಿ, ಮೈಸೂರು ಯೂನಿವರ್ಸಿಟಿ ಮತ್ತು ಬೆಂಗಳೂರು ಯೂನಿವರ್‌ಸಿಟಿಗಳಲ್ಲಿ ಕೂಡಾ ಈ ಆರ್ಡರನ್ನು ಜಾರಿಗೆ ಕೊಡುತ್ತಾ ಇದ್ದಾರೆ.

ಶ್ರೀ ಕೆ. ಸಿದ್ದಯ್ಯ : —ಈ ಗೌರ್ನಮೆಂಟ್ ಆರ್ಡರ್‌ನಲ್ಲಿರುವ ಆಜ್ಞೆ ಎಲ್ಲಾ ಕಡೆಗೂ ಅಪ್ಲೈ ಆಗುವುದಿಲ್ಲವೇ ಸ್ವಾಮಿ ?

ಶ್ರೀ ಡಿ. ದೇವರಾಜ್ ಅರಸ್ :——1969ನೇ ಇಸವಿಯಲ್ಲಿ ಆದದ್ದಲ್ಲದೆ ಮತ್ತೆ 1971ನೇ ಇಸವಿಯಲ್ಲಿ ಎಲ್ಲ ಕಡೆಗೂ ಅಪ್ಲೈ ಮಾಡಬೇಕೆಂದು ಆದೇಶ ಕೊಡಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಆರ್ಡರ್ 1971ರಲ್ಲಿ ಹೊರಡಿಸಿದ್ದಾರೆಂದು ಹೇಳಿದ್ದೀರಿ. ಈ ಆರ್ಡರ್ ಎಷ್ಟು ದೂರ ಜಾರಿಗೆ ಬಂದಿದೆ ಎಂದು ಹೇಳುವುದಕ್ಕೆ ಆಗುವುದಿಲ್ಲವೇ ಸ್ವಾಮಿ? ಎಷ್ಟು ಜಾರಿಗೆ ಬಂದಿದೆ ಅಥವಾ ಬರದೆ ಇದ್ದರೆ ಏನು ಮಾಡುತ್ತೀರಿ ಎಂದು ತಿಳಿಸುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್. ಆ ಆರ್ಡರ್‌ರನ್ನು ಜಾರಿಗೆ ಕೊಟ್ಟಿಲ್ಲವೆಂದು ನನ್ನ ಗಮನಕ್ಕೆ ಬಂದಿಲ್ಲ. ಆ ರೀತಿ ಎಲ್ಲಿ ಜಾರಿಗೆ ಕೊಟ್ಟಿಲ್ಲವೆಂದು ಕೆಲವು ನಿದರ್ಶನಗಳನ್ನೇನಾದರೂ ಹೇಳಿದರೆ ಅದರ ಬಗ್ಗೆ ಸರ್ಕಾರ ಜಾರಿಗೆ ಕೊಡುವಂತೆ ಏರ್ಪಾಡು ಮಾಡುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್—ಎಲ್ಲಿ ಶೇಕಡ 50 ಪರ್ಸೆಂಟ್ ಸರ್ಕಾರದ ಹಣ ಇರುತ್ತದೆಯೋ ಅಂತಹ ಎಲ್ಲಾ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ಗಳಿಗೂ ಅಪ್ಲೈ ಮಾಡಬೇಕೆಂದು 1971ನೇ ಇಸವಿಯ ಆರ್ಡರ್‌ನಲ್ಲಿ ತಿಳಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ಯಾವ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲೂ ಕೂಡ ಆ ಆರ್ಡರ್‌ರನ್ನು ಇಂಪ್ಲಿಮೆಂಟ್ ಮಾಡಿಲ್ಲ. ಆ ರೀತಿ ಮಾಡದೆ ಇರುವವರ ಮೇಲೆ ಕ್ರಮ ತೆಗೆದುಕೊಂಡು ಆ ಆರ್ಡರ್ ಇಂಪ್ಲಿಮೆಂಟ್ ಮಾಡುವುದಕ್ಕೆ ಸ್ಟ್ರಿಕ್ಟ್ ಆರ್ಡರ್ ಮಾಡಿ ಪುನಃ ಜಾರಿಗೆ ಕೊಡುತ್ತೀರಾ ಸ್ವಾಮಿ? The order is only on paper and it is not implemented. That is my view.

(No answer)

ಶ್ರೀ ಕಾಗೋಡು ತಿಮ್ಮಪ್ಪ—ಈ 1971ನೇ ಇಸವಿಯ ಆರ್ಡರನ್ನು ಮೈಸೂರು ರಾಜ್ಯದ ವಿದ್ಯುಚ್ಛಕ್ತಿ ಮಂಡಲಿಯವರು ಮತ್ತು ಭದ್ರಾವತಿ ಉಕ್ಕಿನ ಕಾರ್ಖಾನೆಯವರು ಪರಿಪಾಲನೆ ಮಾಡಿಲ್ಲ ಎಂದು ತಮಗೆ ದೂರು ಬಂದಿಲ್ಲವೇ? ಬಂದಿದ್ದರೆ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

SRI D. DEVARAJ URS.—I have just now said that I will call for a report from all hese industries.

ಶ್ರೀ ಕೆ. ಸಿದ್ದಯ್ಯ.—1969ನೇ ಇಸವಿಯಲ್ಲಿ ಆದ ಗೌವರ್ನಮೆಂಟ್ ಆರ್ಡರ್‌ನಲ್ಲಿ ಕೆಲವು ಬದಲಾವಣೆಗಳು 1971ನೇ ಇಸವಿಯಲ್ಲಿ ಆಗಿವೆ. 1971ನೇ ಇಸವಿಯಲ್ಲಿ ಒಂದು ವೇಳೆ ಆಯಾಯ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಅವರು ಇವರಿಗೆ ಪ್ರಾತಿನಿಧ್ಯ ಕೊಡದೆ ಇದ್ದ ಪಕ್ಷದಲ್ಲಿ ಅದನ್ನು ಯಾವಾಗ ಜಾರಿಗೆ ಕೊಟ್ಟಿದ್ದಾರೆ ಎಂಬುದನ್ನು ತಿಳಿಸುತ್ತೀರಾ ಸ್ವಾಮಿ?

ಶ್ರೀ ಡಿ. ದೇವರಾಜ್ ಅರಸ್.—ಅದರ ಬಗ್ಗೆ ಒಂದು ರಿಪೋರ್ಟು ತರಿಸುತ್ತೇನೆ ಎಂದು ಹೇಳಿದ ಮೇಲೆ ಮತ್ತೆ ಇದರ ಮೇಲೆ ನಾನು ಏನು ಹೇಳುವುದಕ್ಕೂ ಬರುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಈ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಯಾವು ಯಾವುದು ಇದೆ ಅದರಲ್ಲಿ ಸೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಸೆಡ್ಯೂಲ್ಡ್ ಟ್ರೈಬ್ಸ್ ಜನಾಂಗದವರಿಗೆ ಕೊಡಬೇಕಾದಂತಹ 18 ಪರ್ಸೆಂಟ್ ಪ್ರಾತಿನಿಧ್ಯವನ್ನು ಯಾವ ಯಾವ ಸಂಸ್ಥೆಗಳಲ್ಲಿ ಎಷ್ಟೆಷ್ಟು ಪರ್ಸೆಂಟ್ ಕೊಟ್ಟಿದ್ದಾರೆಂದು ಹೇಳುತ್ತೀರಾ ಸ್ವಾಮಿ ?

ಶ್ರೀ ಕಾಗೋಡು ತಿಮ್ಮಪ್ಪ.—ಇದು ಒಹಳ ಪ್ರಾಮುಖ್ಯವಾದ ಪ್ರಶ್ನೆ ಆಗಿರುವುದರಿಂದ ಇದನ್ನು ಚರ್ಚೆ ಮಾಡಲು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಾ ಸ್ವಾಮಿ ?

ಶ್ರೀ ಡಿ. ದೇವರಾಜ್ ಅರಸ್.—ನಾನು ಹೇಳುವುದು ಇಷ್ಟೆ. ರಿಪೋರ್ಟು ತರಿಸಿ ಅವರಿಗೆ ಕೊಟ್ಟಮೇಲೆ ಮಾನ್ಯ ಅಧ್ಯಕ್ಷರು ಕಾಲಿಂಗ್ ಅಟೆನ್‌ಷನ್ ನೋಟೀಸು ಎಂದು ಟ್ರೀಟ್ ಮಾಡಬೇಕೋ ಅಥವಾ ಯಾವ ರೀತಿ ಚರ್ಚೆಗೆ ತೆಗೆದುಕೊಳ್ಳಲು ಅವಕಾಶ ಕೊಡಬೇಕೋ ಆ ರೀತಿ ಕೊಡಲಿ.

AMOUNT PROVIDED AND SPENT BY THE SAGAR PUBLIC WORKS DEPARTMENT SUB-DIVISION

124. SRI KAGODU THIMAPPA (Sagar).—
Will the Minister for Public Works and Electricity be pleased to state :—

(*a*) the total mileage of R. C Road sanctioned in each taluk of Sagar Division during 1972-73 ;

(*b*) the amount provided in respect of R. C. Road in each of the taluks during 1972-73 and the amount spent in each of taluks up to 30th of March ;

(*c*) the amount provided in respect of irrigation under different heads in each of the taluks of Sagar Division during 1972-73 and amount spent in each of the taluks within 30th of March ;